ಆಗತಕ್ಕಂಥಾದ್ದು ಎನ್ನುವ ಒಂದು ಪರಿಸ್ಥಿತಿ. ಇದೆಲ್ಲದರ ಬಗ್ಗೆ ಸಮಗ್ರವಾದ ಚಿಂತನೆ ನಡೆಯಬೇಕು. ನಿಜ, ಇಲ್ಲಿ ಕಳ್ಳಭಟ್ಟಿ ಸೇವನೆಯಿಂದ ನಮ್ಮ ಕರ್ನಾಟಕದಲ್ಲಿ ಕೋಲಾರಕ್ಕೆ ಹೋಗತಕ್ಕಂಥ ರಸ್ತೆಯಲ್ಲಿ ಯಾವುದೋ ಒಂದು ಪ್ರಕರಣದಲ್ಲಿ 80 ಜನ ಸತ್ತರು. ಅದೇ ಪ್ರಕಾರ ಅನೇಕ ಕಡೆ ಜನ ಸತ್ತಿದ್ದಾರೆ, ಇಲ್ಲ ಎನ್ನತಕ್ಕಂಥ ಪ್ರಶ್ನೆ ಬೇರೆ. ನನಗನ್ನಿಸುತ್ತದೆ, ಈ ಒಂದು ವ್ಯವಸ್ಥೆ, ಈ ಸಾಮಾಜಿಕ ಪಿಡುಗಿನಿಂದ, ತಮ್ಮ ವಾಕ್ಯದಲ್ಲಿ ತಾವು ಹೇಳುತ್ತೀರಿ ಸಾಮಾಜಿಕ ಪಿಡುಗು ಬರೀ ಇದು ಒಂದರಲ್ಲೇ ಇದೆಯೇ ಎಂದು.

ನಿಜ, ಇದೊಂದೇ ಎನ್ನುವುದನ್ನು ನನ್ನ ವಾದದಲ್ಲಿ ಒಪ್ಪದೇ ಇದ್ದರೂ, ಪರಿಣಾಮಕಾರಿಯಾಗಿ ಇದು ಅಪಾಯ. ಇದು ಅಪಾಯಕಾರಿ ಮನೋಭಾವನೆ ಇರತಕ್ಕಂಥ ಒಂದು ವಸ್ತು. ನಾನು ಆ ದೃಷ್ಟಿಯಿಂದ ಈ ಪಾನನಿರೋಧವನ್ನು ಜಾರಿಗೆ ತರುವುದರಿಂದ ಎಷ್ಟು ಅನುಕೂಲಗಳು, ಪಾನವನ್ನು ಸೇವಿಸುವುದರಿಂದ ಎಷ್ಟು ಅನುಕೂಲಗಳು ಇವೆ ಎನ್ನುವುದರ ಬಗ್ಗೆ ನಾವು ದೀರ್ಘವಾಗಿ ಚರ್ಚೆ ಮಾಡಿದಾಗ ನನಗನಿಸುತ್ತದೆ ಅಧ್ಯಕ್ಷರೇ, ಪರಿಸರ.....

ಅಧ್ಯಕ್ಷರು:- ಒಂದು ಕೆಲಸ ಮಾಡೋಣ. ಇದನ್ನು ಜೀವಂತ ಇಟ್ಟಿರೋಣ. ಏಕೆಂದರೆ, ಇವತ್ತು ಬಹಳ ಜನ ಸದಸ್ಯರುಗಳು ಊರಿಗೆ ಹೋಗುವವರಿದ್ದಾರೆ. ಮತ್ತೆ ಮುಂದಿನ ಶುಕ್ರವಾರ ಇದನ್ನು ತೆಗೆದುಕೊಳ್ಳೋಣ. ತಾವು ಸಹಕರಿಸಿದರೆ, ತಮ್ಮ ಭಾಷಣವನ್ನು ಮುಂದಿನ ಶುಕ್ರವಾರ ಮುಂದುವರಿಸೋಣ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು.

ಅಧ್ಯಕ್ಷರು:- ಇದು ಬಹಳ ಮುಖ್ಯವಾದ ವಿಚಾರ ಆಗಿರುವುದರಿಂದ, ಟೈಮ್ ಕಡಿಮೆ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ, ಈಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು, ಜೇವರ್ಗಿ ಚುನಾವಣೆ ವಿಚಾರಕ್ಕೆ ಹೇಳಿಕೆ ಕೊಡಬೇಕು.

ಮಂತ್ರಿಗಳ ಹೇಳಿಕೆ.

ವಿಷಯ:- ಜೇವರಗಿಯ ಪಂಚಾಯತಿ ಚುನಾವಣೆಯಲ್ಲಿ ಮೀಸಲಾತಿಯ ಬದಲಾವಣೆ.

+ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ಮಾನ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಧರ್ಮಸಿಂಗ್‌ರವರು ಜೇವರ್ಗಿ ಮತ್ತು ಅಫ್ಜಲ್‌ಪುರ ಟೌನ್ ಪಂಚಾಯಿತಿಗೆ ಸಂಬಂಧಪಟ್ಟ ಹಾಗೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಮೀಸಲಾತಿಯನ್ನು ಕೊಟ್ಟಿರತಕ್ಕಂಥ ಅಧಿಸೂಚನೆಯನ್ನು ತಾವು ಏಕಾಏಕಿಯಾಗಿ ಬದಲಾವಣೆ ಮಾಡಿದ್ದೀರಿ ಮತ್ತು ಚುನಾವಣೆಯನ್ನು ಮುಂದೂಡಿದ್ದೀರಿ ಎಂಬತಕ್ಕಂಥ ವಿಚಾರವನ್ನು ಹೇಳಿದರು. ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಕಡತವನ್ನು ತರಿಸಿ ನೋಡಿದ್ದೇನೆ. ನಿಜ, ಸ್ವಲ್ಪಮಟ್ಟಿಗೆ ಇದನ್ನು ಮಾಡಲಿಕ್ಕೆ ಇರತಕ್ಕಂಥ ಕಾರಣ, ಆ

ನಾನ್ನೂರು ಬಿಂದುಗಳನ್ನು ಹಂಚುತ್ತಿರತಕ್ಕ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ತಪ್ಪಾಗಿರತಕ್ಕಂತಾದ್ದು ನಿಜ. ಇದರಲ್ಲಿ ಏನಾಗಿದೆಯೆಂದರೆ, ಚುನಾವಣಾ ಪ್ರಕ್ರಿಯೆ ಶುರುವಾಗಿರತಕ್ಕಂತಾದ್ದು. ಇದರಲ್ಲಿ ಚುನಾವಣೆ ಪ್ರಕ್ರಿಯೆ ಶುರುವಾಗಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ತಹಶೀಲ್ದಾರ್‌ರವರು ಈಗಾಗಲೇ ಚುನಾವಣೆ ಪ್ರಕ್ರಿಯೆಯನ್ನು ಮಾಡಿ, ಜೇವರ್ಗಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಲೇಡಿ ಎನ್ನತಕ್ಕಂತಾದ್ದನ್ನು ತೋರಿಸಿದ್ದಾರೆ, ಮತ್ತು ಅಫ್ಜಲ್‌ಪುರಕ್ಕೆ ಬಿಸಿಎಂ-ಎ ಲೇಡಿ ಎಂದು ತೋರಿಸಿದ್ದಾರೆ. ಈಗ ಜೇವರ್ಗಿಯಲ್ಲೂ ಮತ್ತು ಅಫ್ಜಲ್‌ಪುರದಲ್ಲಿಯೂ ಚುನಾವಣಾ ಪ್ರಕ್ರಿಯೆಯನ್ನು ಮಾಡಿ, ಹಿಂದೆ ಇರತಕ್ಕಂಥ ಅಧಿಸೂಚನೆ ಪ್ರಕಾರ, ಅವರು ಷೆಡ್ಯೂಲ್ಡ್ ಕ್ಯಾಸ್ಟ್ ಲೇಡಿ ಮತ್ತು ಬಿಸಿಎಂಎ ಎಂದು ತೋರಿಸಿ, ಕಳುಹಿಸಿಕೊಟ್ಟಿದ್ದಾರೆ. ಬಹುಶಃ ಇಲ್ಲಿ ಸ್ವಲ್ಪಮಟ್ಟಿಗೆ ತಪ್ಪಾಗಿದ್ದರೂ ಕೂಡ ಬಹುಶಃ ಈಗ ಚುನಾವಣಾ ಪ್ರಕ್ರಿಯೆ ಶುರುವಾಗಿರುವುದರಿಂದ, ನಾನು ಇದನ್ನು ಈಗಾಗಲೇ ಚರ್ಚೆ ಮಾಡಿ, ಯಾವ ಒಂದು ಅಧಿಸೂಚನೆಯನ್ನು ಹೊಸದಾಗಿ ಹೊರಡಿಸಿದ್ದೇವೆ, ಆ ಅಧಿಸೂಚನೆಯನ್ನು ನಾವು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಕಾರಣ, ಚುನಾವಣಾ ಪ್ರಕ್ರಿಯೆ ಶುರುವಾಗಿರುವುದರಿಂದ. ಬಹುಶಃ ಇದು ನಮ್ಮ ಮಿತ್ರರಿಗೆ ಸಮಾಧಾನ ತರಬಹುದೆಂದು ಭಾವಿಸಿದ್ದೇನೆ. ಆದ್ದರಿಂದ, ನಾನು ಹೇಳಿದೆ. ಕಾನೂನು ಬಂದಾಗ, ಅದನ್ನು ನಾವು ಸ್ವಲ್ಪಮಟ್ಟಿಗೆ ಹೊಂದಾಣಿಕೆ ಮಾಡಿಕೊಂಡು, ಇಲ್ಲಿ ನಾವು ಯಾವುದನ್ನೂ ಹಸ್ತಕ್ಷೇಪ ಮಾಡುವ ಜನ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಮ್ಮ ಧರಣಿಯನ್ನು ವಾಪಸ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೇ, ಅವರು ನಮ್ಮ ಬಗ್ಗೆ ಏನೆಲ್ಲಾ ಹೇಳಿದ್ದಾರೆ, ಅದನ್ನೆಲ್ಲಾ ಅವರು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಂದು ಕಾಣುತ್ತೆ. ಬಹುಶಃ ಈ ಕೆಲಸವನ್ನು ಮಾಡುತ್ತೇವೆ.

ಅಧ್ಯಕ್ಷರು:- ಯಾವುದೇ ಒಂದು ಸರ್ಕಾರ ಈ ತರಹ ಒಂದು ನೈಜ ಪ್ರಶ್ನೆಯನ್ನು ವಿರೋಧ ಪಕ್ಷದವರಾಗಬಹುದು ಮತ್ತೆ ಯಾರೇ ಆಗಬಹುದು, ಪ್ರಸ್ತಾಪ ಮಾಡಿದಾಗ ಈ ರೀತಿ ಪ್ರತಿಕ್ರಿಯಿಸುವುದರಿಂದ, ಸದನದ ಕಲಾಪಗಳಿಗೆ ಗೌರವ ಬರುತ್ತದೆ, ಸಾರ್ವಜನಿಕರ ದೃಷ್ಟಿಯಲ್ಲಿ ಸರ್ಕಾರದ ನಡವಳಿಕೆಗಳ ಬಗ್ಗೆಯೂ ಗೌರವ ಬರುತ್ತದೆ. ಈ ನಿಲುವನ್ನು ತಾವು ವ್ಯಕ್ತಪಡಿಸಿದ್ದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಈ ರೀತಿಯ ವಿಚಾರಗಳಲ್ಲಿ ನಾವು ಸ್ಪಷ್ಟತೆಯಿಂದ ಕೆಲಸ ಮಾಡುವುದು ಉತ್ತಮ. ನಾವು ಸೋಮವಾರ ಬೇಡಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ವಿರೋಧಪಕ್ಷಗಳ ಮುಖಂಡರುಗಳು ಸಹಕರಿಸಬೇಕು. ನಾವು ಪುನರ್ ವಿಮರ್ಶೆ ಮಾಡಿ, ನಮ್ಮ ಕಾರ್ಯಕ್ರಮಗಳನ್ನು ನಿಗದಿಗೊಳಿಸಿದಾಗ, 185 ನಿಮಿಷ ಮತ್ತು 180 ನಿಮಿಷ ಬಿ.ಜೆ.ಪಿ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ವಿನಿಯೋಗಿಸಿ, ಉಳಿದ ಎಲ್ಲಾ ನಮ್ಮ ಸ್ನೇಹಿತರಿಗೆ ಸ್ವಲ್ಪ ಸಮಯವನ್ನು ನಿಗದಿ

ಮಾಡಿದ್ದೇವೆ. ಆದರೂ ಇಷ್ಟೆಲ್ಲಾ ಬುದ್ಧಿವಂತಿಕೆ ಮಾಡಿದರೂ ಕೂಡ ನಿನ್ನೆ 3 ಗಂಟೆ ಕಾಲವನ್ನು ಕಳೆದುಕೊಂಡಿದ್ದೇವೆ. ಹೇಗಾದರೂ ಮಾಡಿ ಆ 3 ಗಂಟೆಯನ್ನೂ ಕೂಡ ಪುನಃ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ತಮ್ಮಲ್ಲಿ ವಿನಿಂತಿ ಮಾಡಿಕೊಳ್ಳುತ್ತೇನೆ. ತಮ್ಮ ಸದಸ್ಯರುಗಳು, ಯಾರು ಬರುತ್ತಾರೆ, ಹೆಚ್ಚು ಸಮಯವನ್ನು ಶೂನ್ಯವೇಳೆಗೆ ಉಪಯೋಗಿಸದೇ ಬೇಡಿಕೆಗಳ ಮೇಲಿನ ಚರ್ಚೆಗೆ ಪ್ರಧಾನ್ಯತೆಯನ್ನು ಕೊಡೋಣ. ತಮ್ಮ ಸದಸ್ಯರುಗಳಿಗೆ ಸ್ವಲ್ಪ ತಾಕೀತು ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ...

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಡಾ॥ ಅಂಬೇಡ್ಕರ್ ಪ್ರತಿಮೆ ಶಿಥಿಲವಾದ ಅದನ್ನು ಜುಡಿಷಿಯಲ್ ಪ್ರೋಬ್ ಎಂದು ಸಿ.ಬಿ.ಐ.ಗೆ ರೆಫರ್ ಮಾಡಬೇಕೆಂದು ಕೇಳಿದಾಗ, ಸದನದಲ್ಲಿ ಮಾತುಕತೆ ಮಾಡಿ, ಪುನಃ ಬಂದು ಹೇಳುತ್ತೇವೆಂದು ಹೇಳಿದ್ದರು. ಅದಕ್ಕೆ, ಇದರ ಬಗ್ಗೆ ನಾವು ಪುನಃ ಒತ್ತಾಯ ಮಾಡಿ....

ಅಧ್ಯಕ್ಷರು:- ಆ ವಿಚಾರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಜವಾಬ್ದಾರಿಯನ್ನು ನನ್ನ ಮೇಲೆ ಬಿಟ್ಟಿದ್ದೀರಿ. ಈ ಬಗ್ಗೆ ತಮ್ಮ ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಜೊತೆಯಲ್ಲಿ ಮಾತುಕತೆ ಮಾಡಿದ ಮೇಲೆ, ನಿಮ್ಮ ಇಬ್ಬರ ನಿಲುವನ್ನು ಮನಸ್ಸಿನಲ್ಲಿಟ್ಟುಕೊಂಡು, ಒಂದು ಮಾರ್ಗವನ್ನು ಹುಡುಕಿದ್ದೇನೆ. ನಾವು ಒಂದು ಜಂಟಿ ಸದನದ ಸಮಿತಿಯನ್ನು ಮಾಡೋಣ. ಜಂಟಿ ಸದನದ ಸಮಿತಿಯನ್ನ ಮಾಡಿ, ಅದರ ಸದಸ್ಯರು ಯಾರಿರಬೇಕು, ಎಷ್ಟು ಜನ ಇರಬೇಕು ಎಂಬ ಪ್ರಕಟಣೆಯನ್ನು ಸೋಮವಾರ ಸದನದಲ್ಲಿ ಪ್ರಕಟಣೆ ಮಾಡುತ್ತೇನೆ. ತಾವು ದಯಮಾಡಿ ಸಹಕರಿಸಬೇಕು. ಪುನಃ ನಾವು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುತ್ತಿದ್ದೇವೆ, ನಮಸ್ಕಾರ.

(ಸದನವು ಮಧ್ಯಾಹ್ನ 1-45ಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ 22-7-96ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿರ್ಧರಿಸಲಾಯಿತು)

+ ಈ ಚಿಹ್ನೆಯು ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲವೆಂದು ಸೂಚಿಸುತ್ತದೆ.